4) ಕುಂಠಿಶಾಮನಹಳ್ಳಿ ಗ್ರಾಮದ ಜಮೀನನ್ನು ಸರ್ಕಾರ ಸ್ವಾಧೀನ ಪಡಿಸಿಕೊಂಡಿರುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿ ಕುಂಠಿ ಶಾಮನಹಳ್ಳಿ ಗ್ರಾಮದ ಸರ್ವೆ ನಂಬರ್ 2:2ರಲ್ಲಿ 20 ಕುಂಟೆ ಜಮೀನನ್ನು ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿದ್ದು ಮತ್ತು ಸದರಿ ವಿಚಾರವನ್ನು ಉಚ್ಚ ನ್ಯಾಯಾಲಯದಲ್ಲಿ 2403 :92 ರಲ್ಲಿ ಭೂಮಾಲೀಕರು ಪ್ರಶ್ನಿಸಿದ್ದು ಸರ್ಕಾರದ ಅಧಿನಿಯಮವನ್ನು ಉಚ್ಚ ನ್ಯಾಯಾಲಯ ಸ್ವಾಧೀನ ಪಡಿಸಿಕೊಂಡಿರುವುದನ್ನು ಎತ್ತಿ ಹಿಡಿದಿರುತ್ತದೆ. ಆದರೆ ನಿವೇಶನ ಹಂಚಿಕೆಯಾಗಿರುವ ಹಿನ್ನೆಲೆಯಲ್ಲಿ ಈ ಮಧ್ಯೆ ಮತ್ತೊಮ್ಮೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಸ್ಥಗಿತಗೊಳಿಸಲಾಗಿದೆ. ಇಂಥ ವಿಚಾರದಲ್ಲಿ ಸರ್ಕಾರ ಕೂಡಲೇ ನ್ಯಾಯಾಲಯಕ್ಕೆ ಒದಗಿಸಬೇಕಾಗಿರುವ ದಾಖಲಾತಿಗಳನ್ನು ಒದಗಿಸಿ ಇಂಥ ತಪಾಸಣೆಯನ್ನು ಆದಷ್ಟು ಬೇಗನೆ ಇತ್ಯರ್ಥಗೊಳಿಸಲು ವಿಫಲವಾಗಿರುವ ಬಗ್ಗೆ ಸದನದ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತರಲಾಗುವುದು.

5) ಪುತ್ತೂರು ತಾಲ್ಲೂಕಿನಲ್ಲಿ ಒಂದು ಹೊಸ ಕಂದಾಯ ಸರ್ವೆ ಫಿರ್ಕಾದ ಸ್ಥಾಪನೆ.

ಶ್ರೀ ವಿನಯ ಕುಮಾರ್ ಸೊರಕೆ :- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಈಗಾಗಲೇ ಮೂರು ಕಂದಾಯ ಇಲಾಖಾ ಫಿರ್ಕಗಳಿದ್ದು ಸಾರ್ವಜನಿಕರ ಕೆಲಸ ಕಾರ್ಯಕ್ಕೆ ಹಾಗೂ ಸಂಚಾರಕ್ಕೆ ಹೆಚ್ಚು ತೊಂದರೆಗಳು ಇರುವುದರಿಂದ ಕಳೆದು ಎರಡು ವರ್ಷಗಳ ಹಿಂದೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಹೊಸ ಸರ್ವೆ ಫಿರ್ಕಾದ ಪ್ರಪೋಸಲ್ ಕಳುಹಿಸಿದ್ದು ಇದರ ಬಗ್ಗೆ ಯಾವ ತೀರ್ಮಾನವನ್ನೂ ಕೂಡ ಸರ್ಕಾರ ಕೈಗೊಂಡಿಲ್ಲ. ಆದುದರಿಂದ ಸಾರ್ವಜನಿಕ ಅನುಕೂಲಕರವಾದ ಹೊಸ ಒಂದು ಸರ್ವೆ ಫಿರ್ಕವನ್ನು ಕೂಡಲೆ ರಚನೆ ಮಾಡುವಂತೆ ಮಾನ್ಯ ಕಂದಾಯ ಸಚಿವರನ್ನು ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ.

ಶ್ರೀ. ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಾಂಸದಿಕ ವ್ಯವಹಾರಗಳ ಮಂತ್ರಿಗಳು) - ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ಓದುತ್ತಿದ್ದೇನೆ.

ಮಾನ್ಯ ಸದಸ್ಯರಾದ ಶ್ರೀವಿನಯ ಕುಮಾರ್ ಸೊರಕೆರವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಹಾಲಿ ಮೂರು ಕಂದಾಯ ಇಲಾಖಾ ಫಿರ್ಕಗಳಿದ್ದು ಸಾರ್ವಜನಿಕರ ಕೆಲಸಕಾರ್ಯಕ್ಕೆ ಹಾಗೂ ಸಂಚಾರಕ್ಕೆ ಹೆಚ್ಚು ತೊಂದರೆಯಾಗಿರುವುದರಿಂದ ಮತ್ತೊಂದು ಫಿರ್ಕವನ್ನು ತೆರೆಯುವ ಬಗ್ಗೆ ಕೋರಿರುವುದಾಗಿಯೂ, ಕೂಡಲೇ ಫಿರ್ಕಾವನ್ನು ತೆರೆಯಬೇಕೆಂದು ಕೋರಿರುವರು.

ಸರ್ವೆ ಎಂಬ ಗ್ರಾಮದಲ್ಲಿ ಹೊಸದಾಗಿ ಒಂದು ಫಿರ್ಕಾ ತೆರೆಯಬೇಕೆಂದು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಿದ್ದು ಸರಿ ಅಷ್ಟೆ. ಆದರೆ 1991 ರ ಜನಗಣತಿ ಸಂದರ್ಭದಲ್ಲಿ ಯಾವುದೇ ರೀತಿಯ ಗ್ರಾಮ, ಹೋಬಳಿ, ತಾಲ್ಲೂಕುಗಳ ಎಲ್ಲೆಯಲ್ಲಿ ಬದಲಾವಣೆಯನ್ನು ಮಾಡಬಾರದೆಂದು ಸೂಚನೆ ಕೇಂದ್ರ ಸರ್ಕಾರದಿಂದ ನೀಡಿದ್ದರಿಂದ ಈ ಅಂಶವನ್ನು ತಡೆಹಿಡಿಯಲಾಯಿತು. 1991 ರ ಜನಗಣತಿ ಕಾರ್ಯ ಈಗ ಮುಗಿದಿದೆ. ಈ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಅಗತ್ಯವಿದ್ದಲ್ಲಿ ಸರ್ವೆ ಎಂಬ ಗ್ರಾಮದಲ್ಲಿ ಹೊಸ ಫಿರ್ಕಾವನ್ನು ತೆರೆಯುವ ಕ್ರಮಕ್ಕೆಗೊಳ್ಳಲಾಗುವುದು.

ವಿರೋಧ ಪಕ್ಷದವರಿಂದ ಸಭೆಯ ಬಹಿಷ್ಕಾರದ ಪ್ರಸ್ತಾವನೆ

ಶ್ರೀ ಎಲ್ ಆರ್ ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ವಿರೋಧಪಕ್ಷದ ಸದಸ್ಯರ್ಯಾರೂ ಸದನದಲ್ಲಿ ಇಲ್ಲ. ಬಡ್ಜೆಟ್ ಬಗ್ಗೆ ಚರ್ಚೆ ನಡೆವಾಗ ವಿರೋಧಪಕ್ಷದವರು ಸಲಹೆ ಸೂಚನೆ ಕೊಡತಕ್ಕದ್ದು ಬಹಳ ಮುಖ್ಯ. ತಮ್ಮ ಕೊಠಡಿಯಲ್ಲಿ ವಿರೋಧ ಪಕ್ಷದ ನಾಯಕರನ್ನು ಕರೆಯಿಸಿ ಅವರ ಜೊತೆ ಸರ್ಕಾರ ಮಾತುಕತೆ ನಡೆಸಲಿ ಎಂದು ನಾನು ವಿನಂತಿ ಮಾಡಿತ್ತೇನೆ. ಈ